# ಪ್ರಾಜೆಕ್ಟ್ 560

ನಮ್ಮ 560 | ನಮ್ಮ ಪ್ರಾಜೆಕ್ಟ್ I ನಮ್ಮ ಪಿನ್ ಕೋಡ್

## ನೆರೆಹೊರೆ ಒಡನಾಟ

### ನೆನಪುಗಳು । ಅನುಭವಗಳು । ಕಲ್ಪನೆಗಳು

ಜನರಿಂದ ನೆರೆಹೊರೆ ...ನೆರೆಹೊರೆಯಿಂದ ನಗರ . . .

ಗೆಳೆಯರೆಲ್ಲಾ ಸೇರುತ್ತಿದ್ದ ಆ ಸೋಂಬೇರಿಕಟ್ಟೆ। ಬೀದಿಯ ಕೊನೆಯ ಆ ಪುಟ್ಟ ಅಂಗಡಿ । ಉತ್ತರದಿಂದ ಬಂದ ಆ ಅವನು ಮಾಡುತ್ತಿದ್ದ ದೂದ್‌ಪೇಢಾದ ಘಮಲು । ಭೂತದ ಬಂಗಲೆಯೆಂದು ನಾವೆಲ್ಲಾ ಹೆದರುತ್ತಿದ್ದ ಈ ಮನೆ । ನೋಡುತ್ತಾ ನೋಡುತ್ತಾ ಮಾಯವಾದ ಕೆರೆ । ಸಣ್ಣ ಕಥೆಗಳನ್ನು ಬರೆಯುವ ಸೆಕ್ಯೂರಿಟಿ ಯವನು Iಶನಿವಾರಗಳ ಸಂತೆ । ನಟಿಯಾಗಬೇಕೆಂದು ಓಡಿಹೋದ ಆ ಹುಡುಗಿ । ಕ್ಯಾಬ್ ಡ್ರೈವರ್‌ನ ಕನಸುಗಳು । ವರ್ಷಕ್ಕೊಮ್ಮೆ ನಮ್ಮೆಲ್ಲರ ಸಂಭ್ರಮಕ್ಕೆ ಕಾರಣವಾಗುತ್ತಿದ್ದ ಊರಹಬ್ಬ . . .

ಪ್ರತಿ ನೆರೆಹೊರೆಗೂ ಹಲವು ಕಥೆಗಳಿವೆಯಲ್ಲವೇ?

ಮತ್ತೊಮ್ಮೆ ಆ ಕತೆಗಳಿಗೆ ಹಿಂದಿರುಗೋಣ... ಆ ಕತೆಗಳ ಮತ್ತಷ್ಟು ಮಗ್ಗಲುಗಳನ್ನು ಅನ್ವೇಷಿಸೋಣ... ಆ ಕತೆಗಳಿಂದ ಹುಟ್ಟುವ ಇನ್ನಷ್ಟು ಕತೆಗಳಿಗೆ ಕಾಯೋಣ...

**ಗತಕಾಲದ ನೆನಪುಗಳು । ವರ್ತಮಾನದ ಅನುಭವಗಳು । ಭವಿಷ್ಯಕ್ಕೆ ಒಂದಷ್ಟು ಕಲ್ಪನೆಗಳು**

ನೆರೆಹೊರೆಯ ಕಥೆಗಳು, ಜನಗಳು ಹಾಗೂ ಸ್ಥಳಗಳೊಂದಿಗೆ ಆಸಕ್ತಿಯುಳ್ಳ ಬೆಂಗಳೂರಿಗರಿಂದ ನಾವು ಅರ್ಜಿಗಳನ್ನು ನಿರೀಕ್ಷಿಸುತ್ತಿದ್ದೇವೆ. ಈ ಒಡನಾಟಗಳು ಕಥೆ ಹೇಳುವ ಚಟುವಟಿಕೆಗಳು, ಸಂಗೀತ, ಬೀದಿ ಪ್ರದರ್ಶನಗಳು, ತಾತ್ಕಾಲಿಕ ಅಥವಾ ಶಾಶ್ವತ ಇನಸ್ಟಲೇಷನ್‌ಗಳು... ಮುಂತಾದ ಕ್ರಿಯೆಗಳನ್ನು ಒಳಗೊಂಡಿರಬಹುದು. ಈ ಮೂಲಕ ನಾವು ನಮ್ಮ ನೆರೆಹೊರೆಯವರ ಕುರಿತು ಮತ್ತಷ್ಟು ಹಾಗೂ ಮತ್ತೊಮ್ಮೆ ಚಿಂತಿಸಲು ಸಾಧ್ಯವಾಗಬಹುದು. ಇದರಿಂದ ಉತ್ಪನ್ನವಾಗುವ ಹೊಳಹುಗಳನ್ನು ಕಲೆ ಹಾಗೂ ಸಂಸ್ಕೃತಿಯ ಮೂಲಕ ಅಭಿವ್ಯಕ್ತಿಸೋಣ. ಒಟ್ಟಿಗೆ ಬದುಕುವ ಸಂತೋಷವನ್ನು ಹೆಚ್ಚಿಸಿಕೊಳ್ಳೋಣ.

**ಯೋಜನೆಯ ಕಾಲಾವಧಿ** : ಚಟುವಟಿಕೆಗಳು 2018ರ ಆಗಸ್ಟ್ ಹಾಗೂ ಸೆಪ್ಟೆಂಬರ್ ಅಲ್ಲಿ ನಡೆಯಬೇಕು.

**ಸಹಾಯ ಮೊತ್ತ** : ಗರಿಷ್ಟ 25,000 ರೂ.

**ಯಾರು ಅರ್ಜಿ ಸಲ್ಲಿಸಬಹುದು?**

ವ್ಯಕ್ತಿಗಳು ಅಥವಾ ಸಾಮುದಾಯಿಕ ಸಂಸ್ಥೆಗಳು. ಅಂದರೆ...

- ನೀವು ಭಾರತೀಯ ಪೌರರಾಗಿರಬೇಕು
- ನೋಂದಾಯಿತ ಲಾಭಾಪೇಕ್ಷೆಯಿಲ್ಲದ ಸಂಘ-ಸಂಸ್ಥೆಗಳು
- ಒಂದು ಸಮುದಾಯ ಕೇಂದ್ರ ಅಥವಾ ಗುಂಪು

ಅರ್ಜಿ ಸಲ್ಲಿಸುವ ವ್ಯಕ್ತಿ ಅಥವಾ ಸಂಸ್ಥೆ ಬೆಂಗಳೂರಿನಲ್ಲಿ ನೆಲೆಸಿರಬೇಕು.

ಈ ಯೋಜನೆಯ ಪ್ರೇಕ್ಷಕರು ವಿಭಿನ್ನ ಹಿನ್ನೆಲೆಯವರಾಗಿರಬೇಕೆಂಬುದನ್ನು ನಾವು ದೃಢವಾಗಿ ಪ್ರೋತ್ಸಾಹಿಸುತ್ತೇವೆ.

**ಅರ್ಜಿ ಸಲ್ಲಿಸುವುದು ಹೇಗೆ ?**

ಈ ಕೆಳಗಿನ ಅಂಶಗಳನ್ನು ಒಳಗೊಂಡಂತೆ ಬರೆಯಿರಿ :

1) ನಿಮ್ಮ ನೆರೆಹೊರೆಯ ವಿಭಿನ್ನ ಜನರ ಕುರಿತು, ಆ ಜನಪ್ರದೇಶದ ಇತಿಹಾಸ, ಮಾರುಕಟ್ಟೆ ಕೇಂದ್ರಗಳು, ಮನೆಯ ಮಾದರಿಗಳು, ಸಮುದಾಯ ಕೇಂದ್ರಗಳು, ಸಾಂಸ್ಕೃತಿಕ ಅಭ್ಯಾಸಗಳು... ಹೀಗೆ ನಗರದಲ್ಲಿ ವಿಭಿನ್ನ ಎನಿಸುವ ನಿಮ್ಮ ನೆರೆಹೊರೆಯ ಕುರಿತು
2) ನೀವು ಹಮ್ಮಿಕೊಳ್ಳಬೇಕೆಂದಿರುವ ಚಟುವಟಿಕೆಗಳ ಕುರಿತು ಬರೆಯಿರಿ. ಆ ಚಟುವಟಿಕೆಗಳನ್ನು ಯಾರು ನಿರ್ವಹಿಸುತ್ತಾರೆ ಹಾಗೂ ಪಾಲ್ಗೊಳ್ಳುವವರು ಯಾರು ಎಂಬುದು ಸ್ಪಷ್ಟವಿರಲಿ.

ನಿಮ್ಮ ಪ್ರಸ್ತಾವನೆಗಳನ್ನು ಇಂಗ್ಲೀಷನ್ನೂ ಒಳಗೊಂಡಂತೆ ಭಾರತದ ಯಾವುದೇ ಭಾಷೆಯಲ್ಲಿ ಬೇಕಾದರೂ ಬರೆಯಬಹುದು.

ಪ್ರಸ್ತಾವನೆಯ ಕುರಿತು ಚರ್ಚೆ ಮಾಡಲು ನೀವು ನಮ್ಮನ್ನು ದೂರವಾಣಿ ಮುಖೇನ, ಪತ್ರ ಮುಖೇನ ಅಥವಾ ನೇರವಾಗಿಯೂ ಸಂಪರ್ಕಿಸಬಹುದು.

**ಆಯ್ಕೆ ವಿಧಾನ :**

ಕೆಲವು ಆಯ್ದ ಅರ್ಜಿಗಳನ್ನು ಜುಲೈ 2018 ರೊಳಗೆ ಸೂಚಿಸಲಾಗುವುದು. ಐಎಫ್‌ಎ ಸಮಿತಿಯೊಂದಿಗಿನ ವಿವರವಾದ ಚರ್ಚೆಯ ನಂತರ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು.

**ಹೆಚ್ಚಿನ ಮಾಹಿತಿಗಾಗಿ :**

ಐಎಫ್‌ಎನ ಟಿ.ಎನ್. ಕೃಷ್ಣಮೂರ್ತಿ, ಕಾರ್ಯಕ್ರಮ ನಿರ್ವಾಹಕರು, krishna@indiaifa.org

ಅಥವಾ

ತನ್ವೀರ್ ಅಜ್ಸಿ, ಕಾರ್ಯಕ್ರಮ ನಿರ್ವಾಹಕರು tanveerajsi@indiaifa.org
ಇವರನ್ನು ಸಂಪರ್ಕಿಸಬಹುದು.

**ನಿಮ್ಮ ಪ್ರಸ್ತಾವನೆಗಳನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.**

**ಪ್ರಾಜೆಕ್ಟ್ 560 2018**
ನೆರೆಹೊರೆಯ ಒಡನಾಟಗಳು
ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್
'ಅಪೂರ್ವ' ನೆಲಮಹಡಿ , ಸಂಖ್ಯೆ 259
ನಾಲ್ಕನೇ ತಿರುವು, ರಾಜ್ ಮಹಲ್ ವಿಲಾಸ್,
ಎರಡನೇ ಹಂತ, ಎರಡನೇ ಬ್ಲಾಕ್,
ಬೆಂಗಳೂರು– 560 094
ದೂರವಾಣಿ : 080–23414681/82 । http://www.indiaifa.org/

**ಪ್ರಾಜೆಕ್ಟ್ 560 ರ ಕುರಿತು:**

**ಪ್ರಾಜೆಕ್ಟ್ 560** ಇದು ಐಎಫ್‌ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. **ಪ್ರಾಜೆಕ್ಟ್ 560** ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ. ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

ಈ ವರ್ಷ ಪ್ರಾಜೆಕ್ಟ್ ೫೬೦ ಸಿಟಿ ಇಂಡಿಯಾದ ಸಹಯೋಗದೊಂದಿಗೆ ನಡೆಯುತ್ತಿದೆ.